ಅವರಿಗೆ ಊಟ ಬೇಕಿರಲಿಲ್ಲ. ಮಾತು ಮುಗಿದಿದ್ದವು. ಒಬ್ಬರಿಗೊಬ್ಬರು ಕಾಣಿಸದಷ್ಟು ಕತ್ತಲಿತ್ತು. ತಾಕಿದರೆ ಭಾವ ಅರ್ಥವಾಗುವಷ್ಟು ಪರಿಚಯವಿತ್ತು. ಆ ಕತ್ತಲಲ್ಲಿ ಅವರಿಬ್ಬರೂ ಹಾಗೆ ತುಂಬ ಹೊತ್ತು ಕುಳಿತಿದ್ದರು. ಹೀಗೆ ಓಡಿ ಬಂದದ್ದಕ್ಕೆ ಏನು ಸಿಕ್ಕಿತು? ಎಂಬ ಪ್ರಶ್ನೆ ಅವ್ಯಕ್ತವಾಗಿ ಅವರಿಬ್ಬರ ನಡುವೆ ಸಿಕ್ಕಿ ಹಾಕಿಕೊಂಡಿತ್ತು.

'ನಾಳೆ...' ಅವಳೆಂದಳು.

'ಏನು ನಾಳೆ?' ಕೇಳಿದ.

'ನಾನು ಹೋಗಬೇಕು. ನನ್ನ ಮನೆಗೆ. ನನ್ನ ಬೇಲಿಯೊಳಕ್ಕೆ. ಗಂಡನ ಕಣ್ಗಾವಲಿನೊಳಕ್ಕೆ...'

ಅವನು ಸುಮ್ಮನಿದ್ದ.

'ನಿನಗೇನೂ ಕೊಡಲಾಗಲಿಲ್ಲ...' ಅವಳು ಮತ್ತೆ ದನಿಯಾದಳು. ಆಗಲೂ ಸುಮ್ಮನಿದ್ದ. ಮೂವತ್ತೈದರ ಹೆಂಗಸು ಏನು ಕೊಡಬಲ್ಲಳು? ಪರ್ಸಿನ ತುಂಬ ಗರಿಗರಿ ನೋಟುಗಳಿವೆ. ಅವಳ ಹಣವಲ್ಲ. ಒಡವೆಗಳಿವೆ. ಅವಳದಲ್ಲ. ಅತ್ತರಿನ ಘಮವಿದೆ. ಗಂಡ ಕೊಡಿಸಿದ್ದು. ಏನು ಕೊಟ್ಟಾಳು? ತಟಕ್ಕನೆ ಎದ್ದು ಕೊರಳ ಸುತ್ತಲಿದ್ದ ಪಲ್ಲೂ ನೆಲಕ್ಕೆ ಹಾಸಿದಳು. ಅದರ ಮೇಲೆ ಅಂಗಾತ ಮಲಗಿ ಅವನತ್ತ ಕೈ ಚಾಚಿದಳು. ಕಟ್ಟೆಯ ಮೇಲೆ ಕುಳಿತವನ ಆಕೃತಿ ನಿಧಾನವಾಗಿ ಕದಲಿತು. ಒಂದೇ ಒಂದು ಸಣ್ಣ ಮಾತೂ ಆಡದೆ, ಅವಳು ಕೊಡಬಯಸಿದ್ದೇನೆಂಬುದು ಅವನಿಗರ್ಥವಾಗಿತ್ತು. ಕತ್ತಲಲ್ಲಿ ಅವಳ ಪಕ್ಕಕ್ಕೆ ಮಲಗಿದ. ತೋಳೆತ್ತಿ ಅವಳ ತಲೆಯಡಿಗೆ ದಿಂಬಿನಂತೆ ಹರಡಿದ. ಮೃದುವಾಗಿ ಕೆನ್ನೆ ತಟ್ಟಿದ.

'ಮಲಗು, ನೆಮ್ಮದಿಯಾಗಿ ಕಣ್ಮುಚ್ಚಿ ಮಲಗು. ನಿನ್ನನ್ನು ಕಾಯುತ್ತ ಕೂಡುವ ಯಾವ ಕಣ್ಣುಗಳಿಗೂ ಕಾಣಿಸದಷ್ಟು ಕತ್ತಲೆಯಿದೆ. ನೀನೀಗ ಅವನ ಹೆಂಡತಿಯಲ್ಲ, ಅವನ ಮಕ್ಕಳ ಅಮ್ಮನಲ್ಲ, ಅತ್ತೆಯ ಸೊಸೆಯಲ್ಲ. ಪಕ್ಕದ ಮನೆಯವನ ಅನುಕಂಪವಲ್ಲ. ನೀನೀಗ ಕೇವಲ ನೀನು. ಥಕ್ಕನೆ ನೆನಪಾಗಿ ಬಾಯಿಗೆ ಬಂದಂಥ ಹಳೆಯ ಹಾಡು. ಮೂವತ್ತೈದು ವರ್ಷಗಳ ಹಿಂದೆ ಮಾತಿಲ್ಲದೆ ಮಲಗಿದ್ದ ಮೂಕ ಭ್ರೂಣ. ನಿನಗೆ ರೂಪವಿಲ್ಲ, ಬಣ್ಣವಿಲ್ಲ. ಕನ್ನೆತನವಿಲ್ಲ. ಜೋಗುಳದ ಯಾಚನೆಯಿಲ್ಲ. ತಾಯ್ತನದ ಯಾತನೆಯಿಲ್ಲ. ಬೇಲಿ ಹರಿದೊಗೆಯುವ ಚಡಪಡಿಕೆಯಿಲ್ಲ. ಮೈಮರೆತು ಮಲಗು. ಇಂಥದೊಂದು ನಿರಾತಂಕ ರಾತ್ರಿಯನ್ನು ನಿನಗೆ ಭಗವಂತನೂ ಕೊಡಲಾರ. ನಿದ್ದೆ ಮಾಡು.' ತಾಯಿಗಿಂತ ಮೃದುವಾಗಿ ಪಿಸುಗುಟ್ಟಿದ.

'ನಿನಗೆ?...'

'ವಿಮಾನಗಳ ನೆರಳಿಲ್ಲದ ಆಕಾಶವಿದೆ. ಚಿಕ್ಕೆಗಳಿವೆ. ನನ್ನೊಂದಿಗೆ ನೀನಿದ್ದೀಯೆಂಬ ಭಾವನೆ ಸಾಕು. ನೀನು ಕೊಡಬಹುದಾದ ನಿನ್ನದೆಂಬ ನಿನ್ನನ್ನು ಒಪ್ಪಿ ಇಸಿದುಕೊಂಡ ಒಂದು ಕ್ಷಣದ ತೃಪ್ತಿಗಿಂತ ಹೀಗೆ ನನ್ನೊಳಗೆ ನೀನಿದ್ದೀಯೆಂಬ ಭಾವ ದೊಡ್ಡದು, ವೆನ್ನೆಲಾ... ನಿನ್ನಲ್ಲಿರುವುದು ಇದೊಂದೇ ಆದರೆ... ಅದನ್ನು ದೋಚಿ ನಾನು ಏನಾಗಬೇಕು? ನಿನ್ನ ಗಂಡನಾಗಬೇಕೆ? ಮನೆಯೆದುರಿಗಿನ ಮಾಂಸದ ಅಂಗಡಿಯವನು, ಹೇಳದೆ ಕೇಳದೆ ಹೆಸರಿಟ್ಟು ಪ್ರೀತಿಸಿದವನು, ಪ್ರಹರಿ ದಾಟಿ ಓಡಿಬರುವಂಥ ಧೈರ್ಯವನ್ನು ಎದೆಗೆ ಸುರಿದವನು, ಇಂಥ ಕತ್ತಲಲ್ಲಿ ಹೀಗೆ ಏನೂ ಅಲ್ಲದೆ ಪಕ್ಕಕ್ಕೆ ಮಲಗಿ ಪಿಸುಗುಟ್ಟುವವನು ಇದ್ದಕ್ಕಿದ್ದಂತೆ ನಿನ್ನ ಗಂಡನಾಗಬೇಕೆ? ಮಲಗು.' ಎಂದು ಸುಮ್ಮನಾದ.

ಮರುದಿನ ಬೆಳಕು ಹರಿಯುವ ಹೊತ್ತಿಗೆ ಈ ಶಿಥಿಲದ ತಲಬಾಗಿಲಲ್ಲಿ ಅವನು ಮತ್ತು ಒಂದು ಲಿಂಬೆ ಬಣ್ಣದ ಪಲ್ಲೂ ಮಾತ್ರ ಉಳಿದಿದ್ದವು. ದೂರದೂರಿನ ಮನೆಯ ಪ್ರಹರಿಯೊಳಕ್ಕೆ ಮೂವತ್ತೈದರ ಹೆಂಗಸೊಬ್ಬಳು ಉಸಿರಿನಷ್ಟು ಹಗುರವಾಗಿ ಇಳಿಯುತ್ತಿದ್ದಳು.

❖